(*a*) the number of Local Boards Employees whose pension claims are pending with the Government ;

(i) For more than five years after retirement,

(ii) For more than two years after retirement,

(iii) the reasons for delay ?

SRI K. Prabhakar (Minister for Rural Development and Panchayati Raj)—

(*a*) Nil.

In view of reply to (*a*) above, this does not arise.

ಭೂ ಸುಧಾರಣಾ ಕಾಯಿದೆ ಅನ್ವಯವಾ ವಶಪಡಿಸಿಕೊಂಡ ಹೆಚ್ಚುವರಿ ಜಮೀನು

೩೮೮ ಶ್ರೀ ಸಿ. ಎಸ್. ಮುತ್ತಿನ ಪೆಂಡಿಮಠ್ (ಗದಗ್)–ಮಾನ್ಯ ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ :—

(ಅ) ಭೂ ಸುಧಾರಣಾ ಕಾಯಿದೆಯ ಪ್ರಕಾರ ಇಲ್ಲಿಯವರೆಗೆ (೩೧ನೇ ಮಾರ್ಚಿ ೧೯೭೮)ರ ವರೆಗೆ ಸರ್ಕಾರದವರು ವಶಪಡಿಸಿಕೊಂಡ ಹೆಚ್ಚುವರಿ ಜಮೀನುಗಳು ಎಷ್ಟು ಎಕರೆಗಳು :

(ಆ) ಇಲ್ಲಿಯವರೆಗೆ ಪರಿಹಾರವನ್ನು ಹೊಂದಿದ ಮಾಲೀಕರ ಸಂಖ್ಯೆ ಎಷ್ಟು ?

ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಮಂತ್ರಿಗಳು)

(ಅ) ೬೧,೫೫೧ ಎಕರೆ ೫ ಗುಂಟೆಗಳು.

(ಆ) ೧೬,೪೬೧.

ಹಾಸನ ತಾಲ್ಲೂಕು ಕಟ್ಟಾಯದ ಸರಕಾರಿ ಹೈಸ್ಕೂಲು ಕಟ್ಟಡ

೪೦ ಶ್ರೀ ಕೆ. ಪಟೆ. ಹನುಮೇಗೌಡ (ಹಾಸನ). — ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :

(ಅ) ಹಾಸನ ತಾಲ್ಲೂಕು ಕಟ್ಟಾಯದ ಸರಕಾರಿ ಹೈಸ್ಕೂಲು ಕಟ್ಟಡದ ಅಂದಾಜು ಮೊಬಲಗೆಷ್ಟು.

(ಆ) ಯಾವ ತಾರೀಖಿನಲ್ಲಿ ಈ ಕಟ್ಟಡಕ್ಕೆ ಸರಕಾರ ಮಂಜೂರಾತಿ ನೀಡಿತು ;

(ಇ) ಈ ಕಟ್ಟಡಕ್ಕೆ ಸಂಬಂಧಿಸಿದಂತೆ ಟೆಂಡರನ್ನು ಯಾವ ದಿನಾಂಕದಂದು ಕರೆಯಲಾಯಿತು ;

(ಈ) ಪ್ರತಿ ತಿಂಗಳೂ ಈ ಕಟ್ಟಡಕ್ಕೆ ಎಷ್ಟು ಹಣ ಖರ್ಚಾಗಿದೆ ;

(ಉ) ಟೆಂಡರ್ ನಿಬಂಧನೆಯಂತೆ ಈ ಕಟ್ಟಡದ ಕೆಲಸ ಪೂರ್ತಿಯಾಗಲಿದೆಯೇ ;

(ಊ) ಇಲ್ಲವಾದಲ್ಲಿ ನಿದಾನಪಾಗಲು ಕಾರಣಗಳೇನು ?

ಶ್ರೀ ಎಸ್. ಬಂಗಾರಪ್ಪ (ಲೋಕೋಪಯೋಗಿ ಮಂತ್ರಿಗಳು)—

(ಅ) ಎಪ್ಪತ್ತೊಂಭತ್ತು ಸಾವಿರ ರೂಪಾಯಿಗಳು, (ರೂ. ೭೯,೦೦೦).

(ಆ) ಸಾರ್ವಜನಿಕ ಶಿಕ್ಷಣ ಇಲಾಖೆಯ ನಿದೇಶಕರು (ಡಿ.ಪಿ.ಐ) ದಿನಾಂಕ ೧೩/೧೨ನೇ ಜನವರಿ, ೧೯೭೮ರಲ್ಲಿ ಆಡಳಿತ ಅನುಮೋದನೆ ಕೊಟ್ಟಿರುತ್ತಾರೆ.

(ಇ) ಹಾಸನ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರವರ ಕಛೇರಿಯು ದಿನಾಂಕ ೧೩ನೇ ಜನವರಿ, ೧೯೭೮ರ ಪ್ರಕಟಣೆಯಲ್ಲಿ ಟೆಂಡರ್ ಕರೆಯಲಾಯಿತು.

(ಈ) ಕೆಲಸ ಇನ್ನೂ ಪ್ರಾರಂಭಿಸಿಲ್ಲವಾಗಿ ಹಣ ಖರ್ಚಾಗಿಲ್ಲ.

(ಉ) ನಿವೇಶನವನ್ನು ಕಂಟ್ರಾಕ್ಟರ್ ವಶಕ್ಕೆ ಕೊಟ್ಟ ದಿನದಿಂದ ೬ ತಿಂಗಳ ಒಳಗೆ (ಟೆಂಡರ್ ನಿಬಂಧನೆಯಂತೆ) ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು.

(ಊ) ಕಟ್ಟಡಕ್ಕೆ ಬೇಕಾಗಿರುವ ನೀವೇಶನ ವಿದ್ಯಾ ಇಲಾಖೆಯವರು ಲೋಕೋಪಯೋಗಿ ಇಲಾಖೆಯ ವಶಕ್ಕೆ ದಿನಾಂಕ ೯ನೇ ಆಗಸ್ಟ್ ೧೯೭೮ ರಂದು ವಹಿಸಿಕೊಟ್ಟಿದ್ದಾರೆ. ಕಾರಣ ಕೆಲಸ ಪ್ರಾರಂಭಿಸಲು ಸಾಧ್ಯವಾಗಿರಲಿಲ್ಲ.

ಹಾಸನ ಡಿವಿಜನ್‌ನಲ್ಲಿ ರಸ್ತೆ ಮತ್ತು ಕೆರೆಗಳ ರಿಪೇರಿಗಾಗಿ ಖರ್ಚುಮಾಡಿದ ಹಣ

೪೧ ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) .— ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

ಕಳೆದ ಎರಡು ವರ್ಷಗಳಿಂದ ಹಾಸನ ಡಿವಿಜನ್ನಿನ ಯಾವ ಯಾವ ಸಬ್ ಡಿವಿಜನ್ನಿನಲ್ಲಿ ರಸ್ತೆ ರಿಪೇರಿ ಮತ್ತು ಕೆರೆಗಳ ರಿಪೇರಿಗಾಗಿ ಎಷ್ಟೆಷ್ಟು ಹಣ ಖರ್ಚುಮಾಡಲಾಗಿದೆ ?

ಶ್ರೀ ಎಸ್. ಬಂಗಾರಪ್ಪ (ಲೋಕೋಪಯೋಗಿ ಇಲಾಖೆಯ ಮಂತ್ರಿಗಳು)—

ವಿವರಗಳ ಪಟ್ಟಿ ಲಗತ್ತಿಸಲಾಗಿದೆ.

ಪರಿಶಿಷ್ಟ

ವಿವರಗಳ ಪಟ್ಟಿ

ಕಳೆದ ಎರಡು ವರ್ಷಗಳಿಂದ ರಸ್ತೆ ಮತ್ತು ಕೆರೆಗಳ ರಿಪೇರಿಗಾಗಿ ಹಾಸನ ಲೊಕೋಪಯೋಗಿ ಡಿವಿಜನ್ನಿಗೆ ಸೇರಿದ ಸಬ್‌ಡಿವಿಜನ್ನಿಗಳಲ್ಲಿ ಖರ್ಚುಮಾಡಿದ ಹಣದ ವಿವರ ಈ ರೀತಿ ಇದೆ.

ಕ್ರಮ ಸಂಖ್ಯೆ	ಸಬ್‌ಡಿವಿಜನ್ ಹೆಸರು	ರಸ್ತೆ ರಿಪೇರಿಗಾಗಿ ಖರ್ಚಾದ ಹಣ ಲಕ್ಷ ರೂ.ಗಳಲ್ಲಿ		ಕೆರೆಗಳ ರಿಪೇರಿಗಾಗಿ ಖರ್ಚು ಮಾಡಲಾದ ಹಣ ಲಕ್ಷ ರೂ.ಗಳಲ್ಲಿ	
		೧೯೭೬–೭೭	೧೯೭೭–೭೮	೧೯೭೬–೭೭	೧೯೭೭–೭೮
೧	ಹಾಸನ	೬.೮೭	೭.೩೯	೪.೭೦	೧.೯೭
೨	ಬೇಲೂರು	೬.೨೬	೬.೬೫	೨.೯೦	೧.೯೪
೩	ಆರಕಲಗೂಡು	೬.೪೭	೬.೫೯	೪.೩೪	೧.೫೪
೪	ಸಕಲೇಶಪುರ	೭.೪೩	೫.೩೫	೧.೭೭	೧.೭೨
೫	ಆಲೂರು	೨.೫೮	೨.೩೧	೨.೪೦	೩.೨೧
೬	ಚನ್ನರಾಯಪಟ್ಟಣ	೧೨.೫೬	೮.೫೯	೪.೭೯	೪.೬೦
೭	ಹೊಳೆನರಸೀಪುರ	೮.೯೫	೪.೫೦	೬.೧೯	೨.೭೯
೮	ಅರಸೀಕೆರೆ	೪.೭೦	೧೧.೪೦	೨.೪೩	೩.೦೨

ಹಾಸನ ತಾಲ್ಲೂಕು ಕಸಬಾ ಹೋಬಳಿ, ಅಂಬಿಹಳ್ಳಿ ಗ್ರಾಮದ ಬಡಪಣೆ

೪೨ ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) — ಆಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವಿರೆ :